# ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

**ಧಾರವಾಡ:** ಹಿರಿಯ ಸಾಹಿತಿ ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ವಿದಿಶಾ ಪ್ರಹಸನ ಕೃತಿಗೆ 2024ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿ ಲಭಿಸಿದೆ.

ಮಹಾಕವಿ ಕಾಳಿದಾಸರು ಬರೆದ ಮಾಲವಿಕಾಗ್ನಿಮಿತ್ರಮ್ ಕೃತಿಯನ್ನು ಡಾ. ಪಟ್ಟಣಶೆಟ್ಟಿ ಅವರು 2000ರಲ್ಲಿ ಕನ್ನಡಕ್ಕೆ ಅನುವಾದಿಸಿದ್ದರು.

ಧಾರವಾಡ ಭಾಷೆಯಲ್ಲಿ ದೊಡ್ಡಾಟ ಶಹಲಿ ಮತ್ತು ಗತ್ತುಗಳನ್ನು ಅಳವಡಿಸಿಕೊಂಡು ಮರು ಬರವಣಿಗೆಯೇ ಈ ರಂಗಾನುವಾದ ವಿದಿಶಾ ಪ್ರಹಸನ ಕೃತಿ. ಇಲ್ಲಿ ಸಂಗೀತ, ನೃತ್ಯ ಎಲ್ಲವೂ ಇರುವುದು ವಿಶೇಷ.

ಕಾಳಿದಾಸರು ತನ್ನ ಕಾಲದ ಆಸ್ಥಾನದಲ್ಲಿ ಕಂಡ ಮದನಾಟ, ಗುಪ್ತಕಾಮ ವ್ಯವಹಾರ, ಅರಾಜಕತೆ, ಪ್ರಜೆಗಳ ಅಸಹಾಯಕ ಮೌನಗಳನ್ನು ಸಹಜ ಚಿತ್ರದಂತೆ ಮಾಲವಿಕಾಗ್ನಿಮಿತ್ರಮ್‌ನಲ್ಲಿ ಬಿಂಬಿತಗೊಂಡಿದೆ.

VIJAYA KARNATAKA, 08.03.2025, KANNADA